# ಸೋನುವಿಗೆ

ಬೆಣ್ಣೆ ಕೆನ್ನೆ ಕಂದನೆ
ಅಮ್ಮನೆದೆಯ ಚಂದ್ರನೆ
ಅಪ್ಪ ಆಕಾಶವಾದ ನಿನ್ನಿಂದಲೇ
ಭೂಮಿ ತಾಯಿ ಸುತ್ತುತಿಹಳು
ನಿನಗಾಗಿಯೇ.

ನಸುಕಿನಲ್ಲಿ ಎದ್ದು ಬೇಗ
ಮರೆಯಲೆಲ್ಲೋ ಅಡಗಿ ಕುಳಿತು
ಕಳ್ಳ ಸ್ವರದಿ ಕರೆಯುತುಂಟು ಹಕ್ಕಿ ನಿನ್ನನು
ಪಲ್ಟಿ ಹೊಡೆದು ಶಿಳ್ಳೆ ಹಾಕಿ
ಹತ್ತು ಬಾರಿ ಕಣ್ಣ ಮುಂದೆ
ಸುತ್ತಿ ಸುಳಿದು ಸುತ್ತು ಬಳಸಿ
ಹೇಳ್ವುದೇನನು?

ಹಸಿರು ಹುಲ್ಲು ಮೆತ್ತೆ ಮೇಲೆ
ಮರವು ತಾನೇ ಹೂವು ಹಾಸಿ
ನೂರು ಕೊಂಬೆ ಕೈಗಳಿಂದ
ಕರೆವುದಾರನು?
ಗಾಳಿ ಕೂಡ ಚವರಿ ಬೀಸಿ
ಹೂವು ಮಧುರ ಕಂಪು ಸೂಸಿ
ಸೋನುವನ್ನು ಕರೆಯುವುದನ್ನು
ಕಾಣುತಿರುವೆನು.

ಅತ್ತ ಇತ್ತ ಹಾರಿ ಏರಿ
ಕುಣಿವ ದುಂಬಿ ನಿನ್ನ ಕೈಗೆ
ಸಿಕ್ಕದಂತೆ ನಟನೆ ಮಾಡಿ ಪುಟ್ಟ ನಾಟಕ
ಭಾವ ಭಂಗಿ ಬೇರೆ ಆದ್ರೂ
ಎಲ್ಲರಾಸೆ ಒಂದೇ ಒಂದು
‘ಸೋನು ಸೋನು ಬಾರೋ
ಬೇಗ ಗುಟ್ಟಿನಾಟಕ’

ಸೋನು ನೀನು ಏನು ಅಂತ
ಪಿಟ್ಟೆ ಚಿಟ್ಟೆ ಹಕ್ಕಿ ಪಿಕ್ಕಿ
ಬಾನು ಕಾನು ಚುಕ್ಕಿ ಚಂದ್ರ
ಎಲ್ಲ ಬಲ್ಲರು!
ಕಂತೆ ಕಂತೆ ಚಿಂತೆಯಲ್ಲಿ
ಮುಳುಗಿ ಹೋದ ಮಂದಿ ಹೇಗೆ
ನಿನ್ನ ನೈಜ ರೂಪ, ಪಾಪ,
ತಿಳಿಯಬಲ್ಲರು?

ಏಳು ಸೋನು ತೋರು ಜನಕೆ
ಕೇಳಿ ಬಲ್ಲ ವಿಶ್ವ ರೂಪ
ಕಟ್ಟು ಕತೆಯೋ ದಿಟ್ಟ ದಿಟವೋ
ಲೋಕ ಕಾಣಲಿ
ನಿಲಿಸಿಬಿಡಲಿ ಭ್ರಾಂತ ಮಂದಿ
ಹುಚ್ಚು ಕುದುರೆ ಓಟವನ್ನು
ಪೆಚ್ಚು ಮೋರೆಗಳಲಿ ಸ್ವಚ್ಛ
ನಗುವು ಅರಳಲಿ.

